# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 2188

ಸದಸ್ಯರ ಹೆಸರು : ಶ್ರೀ ಅರವಿಂದ ಕುಮಾರ್ ಅರಳಿ

ಉತ್ತರಿಸುವ ಸಚಿವರು : ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು

ಉತ್ತರಿಸುವ ದಿನಾಂಕ : 18.03.2022

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಕೊಪ್ಪಳ ಘಟಕದ ಬಸ್‌ಗಳಲ್ಲಿ ನಕಲಿ ಟಿಕೆಟ್ ಉಪಯೋಗಿಸುತ್ತಿರುವುದು ಪತ್ರಿಕೆಗಳ ಮೂಲಕ ಬಯಲಿಗೆ ಬಂದಿರುವುದು ನಿಜವೇ; | ಕ.ಕ.ರ.ಸಾ.ನಿಗಮದ ಕೊಪ್ಪಳ ಘಟಕದ ಬಸ್‌ಗಳಲ್ಲಿ ನಕಲಿ ಟಿಕೆಟ್ ಉಪಯೋಗಿಸುತ್ತಿರುವ ಸುದ್ದಿಯ ಬಗ್ಗೆ ಕೊಪ್ಪಳ ವಿಭಾಗದ ವಿಭಾಗೀಯ ಭದ್ರತಾ ನಿರೀಕ್ಷಕ, ಇವರಿಂದ ವಿಚಾರಣೆ ನಡೆಸಲಾಗಿ, ಅವರ ವಿಚಾರಣಾ ವರದಿಯನ್ವಯ ದಿನಾಂಕ:03.03.2022ರಂದು "ಹೊಸ ದಿಗಂತ ದಿನ" ಪತ್ರಿಕೆಯಲ್ಲಿ ಪ್ರಕಟಣೆಗೊಂಡ ಸುದ್ದಿಯು ಸತ್ಯಕ್ಕೆ ದೂರವಾಗಿರುವುದಾಗಿ ತಿಳಿದು ಬಂದಿರುತ್ತದೆ. |
| ಆ | ಬಂದಿದ್ದಲ್ಲಿ, ಇಂತಹ ಪ್ರಕರಣ ಎಷ್ಟು ವಿಭಾಗದ ಘಟಕಗಳಲ್ಲಿ ನಡೆದಿದೆ; ಎಷ್ಟು ಜನರ ಮೇಲೆ ಪ್ರಕರಣ ದಾಖಲಿಸಲಾಗಿದೆ; ಇದರಲ್ಲಿ ಡಿಪೋಗಳ ಅಧಿಕಾರಿಗಳು ಶಾಮೀಲಾಗಿದ್ದಾರೆಯೇ; ವಿವರಿಸುವುದು. | ಇಂತಹ ಯಾವುದೇ ಪ್ರಕರಣಗಳು ದಾಖಲಾಗಿರದ ಕಾರಣ ಅನ್ವಯಿಸುವುದಿಲ್ಲ. |
| ಇ | ಈ ರೀತಿ ಜರುಗಿದ್ದಲ್ಲಿ, ಎಷ್ಟು ಹಣ ಸೋರಿಕೆಯಾದಂತಾಗಿದೆ ಎಂಬ ಬಗ್ಗೆ ಅಂದಾಜಿಸಲಾಗಿರುವ ವಿಷಯವು ಸರ್ಕಾರದ ಗಮನಕ್ಕೆ ಬಂದಿದೆಯೇ; | |

| | | |
|---|---|---|
| ಈ | ಈ ಹಿಂದೆ ಬೀದರ್ ವಿಭಾಗದಲ್ಲಿ ಅವ್ಯವಹಾರದ ಪ್ರಕರಣ ಜರುಗಿದ್ದರೂ ಅಧಿಕಾರಿಗಳ ವಿರುದ್ದ ಕ್ರಮ ಕೈಗೊಳ್ಳದೆ, ಅವರಿಗೆ ಪದೋನ್ನತಿ ನೀಡಿ ಅಲ್ಲಿಯೇ ಮುಂದುವರಿಸಿರುವುದು ನಿಜವೇ; | ಬೀದರ್ ವಿಭಾಗದಲ್ಲಿ ನಡೆದಿರುವ ಅವ್ಯವಹಾರ ಪ್ರಕರಣದ ವರದಿಯಲ್ಲಿ ಜವಾಬ್ದಾರರನ್ನಾಗಿಸಿದ ಯಾವುದೇ ಅಧಿಕಾರಿಗಳಿಗೆ ಮುಂಬಡ್ತಿ ನೀಡಿರುವುದಿಲ್ಲ. |
| ಉ | ಬೀದರ್ ಹಾಗೂ ಕೊಪ್ಪಳ ಘಟಕಗಳ ಪ್ರಕರಣದಲ್ಲಿ ಎಷ್ಟು ಅಧಿಕಾರಿಗಳಿಂದ ಸೋರಿಕೆಯಾದ ಹಣವನ್ನು ವಸೂಲಿ ಮಾಡಲಾಗಿದೆ; ಸರ್ಕಾರ ಈ ಬಗ್ಗೆ ಯಾವ ಯಾವ ಕ್ರಮ ಕೈಗೊಂಡಿದೆ? | 1. ಬೀದರ್ ವಿಭಾಗದ ಬೀದರ್ ಘಟಕ-1ರಲ್ಲಿನ ಇ.ಟಿ.ಎಂ. ಯಂತ್ರದಲ್ಲಿನ ಸಾರಿಗೆ ಆದಾಯ ರೂ.59,80,237/-ಗಳ ವಂಚನೆಯಾಗಿರುವ ಕುರಿತು ಪ್ರಕರಣದಲ್ಲಿನ ಗಂಭೀರತೆಯನ್ನು ಆಧರಿಸಿ 30 ಅಧಿಕಾರಿ/ ಸಿಬ್ಬಂದಿಗಳ ವಿರುದ್ಧ ಕ.ರಾ.ರ.ಸಾ.ಸಂಸ್ಥೆಯ (ನಡತೆ & ಶಿಸ್ತು) ನಿಯಮಾವಳಿ-1971ರ ನಿಯಮ-23ರಡಿ ಆಪಾದನಾ ಪತ್ರ ಜಾರಿ ಮಾಡಿ ಪ್ರಕರಣವನ್ನು ಇಲಾಖಾ ವಿಚಾರಣೆಗೆ ಒಳಪಡಿಸಲಾಗಿರುತ್ತದೆ. ವಂಚನೆ ಎಸಗಿದ ಆರೋಪಿಗಳು ಮಾಡಿರುವ ಅವ್ಯವಹಾರವನ್ನು ಒಪ್ಪಿಕೊಳ್ಳದೇ ಇದ್ದುದರಿಂದ, ಈವರೆಗೂ ವಂಚನೆಯಾದ ಹಣವು ಸಂಸ್ಥೆಗೆ ಮರುಪಾವತಿಯಾಗಿರುವುದಿಲ್ಲ. ಪ್ರಕರಣವು ಪ್ರಸ್ತುತ ವಿಚಾರಣಾ ಹಂತದಲ್ಲಿರುತ್ತದೆ. ಅಲ್ಲದೇ, ಈ ಪ್ರಕರಣದ ಬಗ್ಗೆ ನೂತನ ನಗರ ಪೊಲೀಸ್ ಠಾಣೆ ಬೀದರಿನಲ್ಲಿ ಪ್ರಕರಣ ಸಂಖ್ಯೆ 25/2019 ಕಲಂ 406, 409, 417 ಐಪಿಸಿ ಕಲಂ 65 ಐ ಟಿ ಆಕ್ಟ್ ದಿನಾಂಕ 9.2.2019ರನ್ವಯ ಪ್ರಕರಣ ದಾಖಲಾಗಿದ್ದು, ಪ್ರಸ್ತುತ ಸದರಿ ಪ್ರಕರಣವು ಪೋಲಿಸ್ ಇಲಾಖೆಯ ವಿಚಾರಣಾ ಹಂತದಲ್ಲಿರುವುದಾಗಿ ತಿಳಿದುಬಂದಿರುತ್ತದೆ.<br><br>2) ಕೊಪ್ಪಳ ಘಟಕದಲ್ಲಿ ಯಾವುದೇ ಸಾರಿಗೆ ಆದಾಯ ಸೋರಿಕೆಯಾಗಿರುವುದಿಲ್ಲ. ಆದರೆ ಕೊಪ್ಪಳ ವಿಭಾಗದ ಗಂಗಾವತಿ ಘಟಕದ |

| | | |
|---|---|---|
| | | ಹಣಕಾಸು ಶಾಖೆಯಲ್ಲಿ ರೂ.35,76,862/-ಗಳ ಸಾರಿಗೆ ಆದಾಯ ಅವ್ಯವಹಾರದ ವಂಚನೆ ಕುರಿತು ಪ್ರಕರಣದಲ್ಲಿ ವಂಚನೆ ಎಸಗಿದ ಶ್ರೀ ರಾಘವೇಂದ್ರ ರಾವ್ (ನಿವೃತ್ತ ನೌಕರ) ರವರಿಂದ ಒಟ್ಟು ಎಲ್ಲಾ ಮೊತ್ತವಾದ ರೂ.35,76,862/-ಗಳನ್ನು ಈಗಾಗಲೇ ವಸೂಲಿ ಮಾಡಲಾಗಿದೆ. ಪ್ರಕರಣದಲ್ಲಿನ ಗಂಭೀರತೆಯನ್ನು ಆಧರಿಸಿ 34 ಅಧಿಕಾರಿ/ ಸಿಬ್ಬಂದಿಗಳ ವಿರುದ್ಧ ಕ.ರಾ.ರ.ಸಾ.ಸಂಸ್ಥೆಯ (ನಡತೆ & ಶಿಸ್ತು) ನಿಯಮಾವಳಿ-1971ರ ನಿಯಮ-23 ರಡಿ ಆಪಾದನಾ ಪತ್ರ ಜಾರಿ ಮಾಡಲಾಗಿರುತ್ತದೆ. ಆ ಪೈಕಿ 11 ಅಧಿಕಾರಿ/ ಸಿಬ್ಬಂದಿಗಳ ಮೇಲಿನ ಆರೋಪವು ಗಂಭೀರ ಸ್ವರೂಪವಲ್ಲದೆಂದು ಶಿಸ್ತು ಪ್ರಾಧಿಕಾರಿ ಪರಿಗಣಿಸಿ ಲಘು ಶಿಕ್ಷೆಯನ್ನು ವಿಧಿಸಿ ಪ್ರಕರಣವನ್ನು ಇತ್ಯರ್ಥಪಡಿಸಲಾಗಿದೆ. ಇನ್ನುಳಿದ 23 ಅಧಿಕಾರಿ ಸಿಬ್ಬಂದಿಗಳಿಗೆ ಸಂಬಂಧಿಸಿದಂತೆ ಪ್ರಕರಣವನ್ನು ಇಲಾಖಾ ವಿಚಾರಣೆಗೆ ಆದೇಶಿಸಲಾಗಿರುತ್ತದೆ. ಪ್ರಕರಣವು ಪ್ರಸ್ತುತ ವಿಚಾರಣಾ ಹಂತದಲ್ಲಿರುತ್ತದೆ. |

ಸಂಖ್ಯೆ: ಟಿಡಿ 110 ಟಿಸಿಕ್ಯೂ 2022

**(ಬಿ.ಶ್ರೀರಾಮುಲು)**
ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ
ಕಲ್ಯಾಣ ಸಚಿವರು